‘ಈ ವಿಶ್ವ ಇನ್ನೆಂದೂ ನಮ್ಮಿಬ್ಬರದೇ! ಇನ್ನೊಂದು ಕ್ರಿಮಿಗೂ ಇಲ್ಲಿ ಪ್ರವೇಶವಿಲ್ಲ—ಪಾಲೂ ಇಲ್ಲ!’ ಇಬ್ಬರೂ ಒಬ್ಬರೇ ಅನ್ನುವಂತೆ ಒಬ್ಬರೊಳಗೊಬ್ಬರು ಹುದುಗಿಕೊಂಡು, ಒಂದೇ ಉಸಿರಾಗಿ ಮುಲುಕುತ್ತಿದ್ದರು—ಕಾಲದ ಪರಿವೆಯಿಲ್ಲದೆ.

‘ಇನ್ನು ಮೂರು ವರ್ಷವಂತೂ ನಾವಿಬ್ಬರೇ... ಇಬ್ಬರೇ ಹೀಗೇ ಇದ್ದುಬಿಡೋಣ.’

ಸ್ವಲ್ಪವೇ ತೆಕ್ಕೆಗಳು ಸಡಿಲಗೊಳ್ಳುತ್ತಲೇ ಅವಳು ಶುರುಮಾಡಿದ್ದನ್ನು ಇವನು ಮುಕ್ತಾಯಗೊಳಿಸಿದ್ದ.

ಅವರು ಅಂದುಕೊಂಡಂತೆಯೇ ಆಯಿತು. ಅವಳು ಎಲ್ಲೋ ಒಂದೆರಡು ತಿಂಗಳು ಸಿಂಗಪುರಕ್ಕೆ, ಇವನು ಎರಡು ಮೂರು ವಾರವಷ್ಟೆ ಜರ್ಮನಿಗೆ ಹೋಗಿದ್ದು ಬಿಟ್ಟರೆ, ಮೂರು ವರ್ಷಗಳ ಕಾಲ, ಅವರು ಯಾವ ವಾರಾಂತ್ಯದಲ್ಲಿಯೂ ಒಬ್ಬರನ್ನೊಬ್ಬರು ಬಿಟ್ಟಿರಲಿಲ್ಲ.

‘ವಿ ಶಲ್ ಹ್ಯಾವ್ ಎ ಚೈಲ್ಡ್ ನೌ.’

‘ಹೌದಲ್ಲೋ, ಮರತೇಬಿಟ್ಟಿದ್ದೆ! ಕಮಾನ್ ವಿ ಶಲ್ ಹ್ಯಾವ್ ಇಟ್ ನೌ.’

‘ತಮಾಷೆ ಮಾಡ್ತಿಲ್ಲ ತಾನೆ?’

‘ತಮಾಷೆ ಏನ್ ಬಂತೋ ಮಾರಾಯ, ನಮ್ಮ ಈ ಸುಖ—ಸಂತೋಷಕ್ಕೆ ಒಂದಾದ್ರೂ ಸಾಕ್ಷಿ ಬೇಡ್ವಾ?’

‘ಎಷ್ಟೊಂದು ಹಣ ಮಾಡಿದೀರಿ, ವಾರಸುದಾರರು ಯಾವತ್ತಪ್ಪಾ ಬರೋದು? ಅಂತ ಅಪ್ಪಅಮ್ಮ ತಮಾಷೆ ಮಾಡಿದ್ರು; ನನಗೂ ಹೌದಲ್ವಾ ಅನ್ನಿಸ್ತು.’

‘ಅಪ್ಪಾಜಿ, ನಿಮಗೆ ಇನ್ನೂ ಮೂರು ಗಂಡು ಮೂರು ಹೆಣ್ಣು ಇದಾವಲ್ಲ—ಆಸ್ತೀನೆಲ್ಲಾ ಅವ್ರಿಗೆ ಕೊಡ್ತೀನಿ ಬಿಡಿ—ಅನ್ಬೇಕಿತ್ತು.’

‘ಅಷ್ಟು ಕೆಟ್ಟ ಭಾಷೆ ಬಾಯಿಗೆ ಬರಲಿಲ್ಲ; ದೊಡ್ಡವರು ತಮ್ಮ ಆಸೆಯನ್ನ ಹ್ಯಾಗೋ ಹೇಳ್ಕೊಂಡಿದಾರೆ ಅಷ್ಟೆ.’

ಮತ್ತೂ ಒಂದು ವರ್ಷ ಕಳೆಯಿತು.

ಆಮೇಲೆ, ಅವಳು ಮೂರು ನಾಲ್ಕು ತಿಂಗಳು ಫಿಲಿಡೆಲ್ಫಿಯಾದಲ್ಲಿದ್ದಳು; ಇವನೂ ಕೆಲವು ತಿಂಗಳು ಹಾಂಗ್ ಕಾಂಗಿಗೆ ಹೋಗಿಬಂದ. ಹೀಗೆ, ವಿದೇಶಗಳಿಗೆ ಕೆಲಸಕ್ಕೆಂದು ಹೋಗಿಬರುವಾಗ ಇಬ್ಬರೂ ತಮ್ಮವರಿಗೆ ಇಷ್ಟವಾದ ಟಾಫಿಗಳನ್ನು ತರುತ್ತಿದ್ದರು. ಮೊದಲ ದರ್ಶನವಾಗುತ್ತಲೇ ಒಬ್ಬರು ಕಣ್ಣುಮುಚ್ಚಿಕೊಳ್ಳುವದು ಇನ್ನೊಬ್ಬರು ಅವರ ಬಾಯಿಗೆ ಟಾಫಿಯನ್ನು ಹಾಕುವುದು, ಆಮೇಲೆ ಇಬ್ಬರೂ ಅಪ್ಪಿಕೊಂಡು ಮುದ್ದಾಡಿಕೊಳ್ಳುವುದು ನಡೆದೇ ಇದ್ದವು—ಸಂಪ್ರದಾಯದಂತೆ...

ವಾರಾಂತ್ಯದ ಒಂದು ಸಂಜೆ ಕಬೋರ್ಡಿನಲ್ಲಿ ಅದೇನನ್ನೋ ಹುಡುಕುತ್ತಿದ್ದಾಗ ಅವಳಿಗೆ ಪುಟಾಣಿ ಪೌಚ್ ಒಂದು ಸಿಕ್ಕಿತು. ಅದು ಎಷ್ಟು ಚಿಕ್ಕದಾಗಿತ್ತೆಂದರೆ, ಮುಷ್ಟಿಯೊಳಗೆ ಅದನ್ನು ಸುಲಭವಾಗಿ ಮುಚ್ಚಿಟ್ಟುಕೊಳ್ಳಬಹುದಾಗಿತ್ತು! ಅರೆ! ಇದೆಲ್ಲಿಂದ ಬಂತು? ಅವಳು ಕುತೂಹಲದಿಂದ ಅದರ ಬಾಯಿ ಹಿಗ್ಗಿಸಿ ನೋಡಿದಳು... ಏನೂ ಇರಲಿಲ್ಲ. ಆದರೆ, ಅದಕ್ಕೆ ಅಂಟಿಕೊಂಡಂತೆ ಸಣ್ಣ ಚೀಟಿಯೊಂದರಲ್ಲಿ, ‘ಮೇಡ್ ಇನ್ ಪಿ.ಆರ್.ಸಿ; ಒರಿಜಿನಲ್ ಪಾಂಡಾ ಸ್ಕಿನ್’ ಎಂದಷ್ಟೆ ಇತ್ತು. ಇದ್ದಕ್ಕಿದ್ದಂತೆ ಅವಳ ಅಂಗಾಂಗಗಳು ಹಿಮದಂತೆ ತಣ್ಣಗಾಗಿಹೋದವು... ಈ ಭೂಮಿಯ ಮೇಲೆ ಹೇಗೋ ಉಳಿದುಕೊಂಡ ಒಂದಿಷ್ಟೆ ಪುಟಾಣಿ ಪಾಂಡಾಗಳು ಮೈಮೇಲೆ ಹರಿದಾಡಿದಂತಾಗಿ ಚಿಟಾರನೆ ಚೀರಿಬಿಟ್ಟಳು!

‘ಯಾಕೆ ಚಿನ್ನೂ, ಏನಾಯ್ತು?’

‘ಅಯ್ಯೋ! ಇದನ್ನೆಲ್ಲಿಂದ ತಂದೆ ಮಾರಾಯ, ಕರುಳು ಕಿತ್ತು ಬರೋ ಹಾಗಿದೆ?’

‘ನಿನಗಾಗಿ ಎಷ್ಟು ಕಷ್ಟಪಟ್ಟು ತಂದಿದೀನಿ ಗೊತ್ತಾ? ಲಕ್ಷ ಕೊಟ್ರೂ ಸಿಗೋಲ್ಲ.’

‘ಇದನ್ನ ಕೊಳ್ಳೊ ಮನಸ್ಸಾದ್ರೂ ಹ್ಯಾಗೆ ಬಂತೋ ಪುಣ್ಯಾತ್ಮ?... ಸರಿ, ಮತ್ತ್ಯಾಕೆ ಬಚ್ಚಿಟ್ಟಿದೀಯ?’